**ಸಾಕ್ಷಿಯನ್ನು ದಿನಾಂಕ 09.05.2025 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ–**

**ಪಾಟೀಸವಾಲು – 3 ನೇ ಎದುರುದಾರರ ಪರ ಶ್ರೀ ಆರ್.ಪಿ.ಪಿ ರವರ ಪರ ಶ್ರೀ ಜಿ.ಆರಿ.ಕೆ ವಕೀಲರಿಂದಃ–**

ನನ್ನ ವಯಸ್ಸನ್ನು ತೋರಿಸಲು ಆಧಾರ ಕಾರ್ಡ್ ದಾಖಲೆಯನ್ನ ಹಾಜರು ಮಾಡಿರುತ್ತೇನೆ. ನನಗೆ ದ್ವಿಚಕ್ರ ವಾಹನವನ್ನ ಚಾಲನೆ ಮಾಡಲು ಪರವಾನಿಗೆ ಇರುತ್ತದೆ. ಅದನ್ನ ನ್ಯಾಯಾಲಯದ ಮುಂದೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ನಾನು ಮೈಕ್ರೋ ಫೈನಾನ್ಸ ಕಂಪನಿಯಲ್ಲಿ ಕೆಲಸಗಾರನಾಗಿದ್ದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಲು ತೊಂದರೆ ಇಲ್ಲ. ನನಗೆ ಸಂಭಳವು HDFC ಖಾತೆಗೆ ಹೋಗುತ್ತಿತ್ತು. ಅಪಘಾತ ಆದ ದಿನ ನಾನು ಕಂಪನಿಯಲ್ಲಿ ಕೆಲಸ ಮುಗಿಸಿಕೊಂಡು ಮಳವಳ್ಳಿಗೆ ಹೋಗುತ್ತಿದ್ದೆ. ನನಗೆ ಅಪಘಾತ ಮಾಡಿದ ಬಸ್ ಮೈಸೂರು ಕಡೆಯಿಂದ ಬರುತ್ತಿತ್ತು. ಅಪಘಾತವು ರಸ್ತೆಯ ಮಧ್ಯೆ ಭಾಗದಲ್ಲಿ ಆಗಿರುತ್ತದೆ ಎಂದರೆ, ಸಾಕ್ಷಿಯು ರಸ್ತೆಯ ಎಡಭಾಗದಲ್ಲಿ ಸಂಭವಿಸಿರುತ್ತದೆ ಎಂದು ಹೇಳುತ್ತಾರೆ. ಅಪಘಾತ ಆದ ತಕ್ಷಣ ನಾನು ಮಳವಳ್ಳಿ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದೆ. ಅಪಘಾತ ಆಗಿದ್ದ ಬಗ್ಗೆ ಮಳವಳ್ಳಿ ಆಸ್ಪತ್ರೆಯಲ್ಲಿ ಬರೆಸಿರುತ್ತೇನೆ. ಸದರಿ ದಾಖಲೆಯನ್ನ ನ್ಯಾಯಾಲಯದ ಮುಂದೆ ಹಾಜರುಪಡಿಸಲು ತೊಂದರೆ ಇಲ್ಲ.

ಮಳವಳ್ಳಿ ಸರ್ಕಾರಿ ಆಸ್ಪತ್ರೆಯಲ್ಲಿ ಒಂದು ದಿನ ಚಿಕಿತ್ಸೆ ಪಡೆದು ನಂತರ ನಾನು ಮೈಸೂರಿನ ಜೆ.ಎಸ್.ಎಸ್ ಆಸ್ಪತ್ರೆಗೆ ಹೋಗಿರುತ್ತೇನೆ. ಮೈಸೂರಿನ ಜೆ.ಎಸ್.ಎಸ್ ಆಸ್ಪತ್ರೆಯಲ್ಲಿ ನಾನು ದಿಃ01.09.2017 ರಲ್ಲಿ ದಾಖಲಾಗಿರುತ್ತೇನೆ. ನಾನು

ಆಸ್ಪತ್ರೆಯಿಂದ ಬಿಡುಗಡೆಗೊಂಡ ನಂತರ ಸುಮಾರು 15 ರಿಂದ 20 ಬಾರಿ ಮಧ್ಯೆ ಮಧ್ಯೆ ಹೋಗಿ ತೋರಿಸಿಕೊಂಡಿರುತ್ತೇನೆ. ನನಗೆ ಅಪಘಾತದಲ್ಲಿ ಆದ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳು ಎಂದರೆ ಸರಿಯಲ್ಲ. ನಾನು ಈಗಲೂ ಸಹ ಕೆಲಸಕ್ಕೆ ಹೋಗುತ್ತಿದ್ದೇನೆ ಎಂದರೆ ಸರಿಯಲ್ಲ. ವೈದ್ಯಕೀಯ ಬಿಲ್ಲುಗಳನ್ನು ಈ ಪ್ರಕರಣಕೋಸ್ಕರ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ವೈದ್ಯಕೀಯ ಬಿಲ್ಲುಗಳಲ್ಲಿ ಮುಂಗಡ ಹಣ ಪಾವತಿ ಮಾಡಿದ್ದ ಬಿಲ್ಲುಗಳನ್ನು ಸಹ ಸೇರಿಸಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತವು ನನ್ನ ತಪ್ಪಿನಿಂದ ಸಂಭವಿಸಿರುತ್ತದೆ ಎಂದರೆ ಸರಿಯಲ್ಲ. ನಾನು ಆರೋಗ್ಯವಾಗಿದ್ದು ನನಗೆ ಯಾವುದೇ ರೀತಿ ತೊಂದರೆ ಇಲ್ಲ, ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ :-ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ ಎ ಒ.,**

**C/c** 2 **ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,**
**ಮೈಸೂರು.**

**MVC – /20**
**PW 01**